ಕರ್ನಾಟಕ ಸರ್ಕಾರ
ಕರ್ನಾಟಕರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, 1ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01
E-mail ID: icps.kar@gmail.com Ph.No.080-22879381/82

ಸಂಖ್ಯೆ: ಕೆಎಸ್ಐಸಿಪಿಎಸ್/TMC/01/2018-19 ದಿನಾಂಕ: 29-11-2018

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು,

ಮಾನ್ಯರೆ,

ವಿಷಯ: ಕರ್ನಾಟಕರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಯಡಿ **Track the Child Portal** ನಡಿ ಮಾಹಿತಿ ಅಳವಡಿಸುವ ಕುರಿತು.

ಉಲ್ಲೇಖ (1) :ಈ ಕಛೇರಿಯ ಸಮಸಂಖ್ಯೆಯ ಪತ್ರ ದಿ:25-10-2018

(2): NIC, ಬೆಂಗಳೂರು ಇವರ ಇ-ಮೇಲ್ ದಿ: 27-11-2018

***

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ, ನವದೆಹಲಿ ಇವರ ಸಹಯೋಗದೊಂದಿಗೆ ಅಭಿವೃದ್ಧಿ ಪಡಿಸಿರುವ **Track the Child** ಎಂಬ ವೆಬ್ಆಧಾರಿತ ತಂತ್ರಾಂಶದ ಬಳಕೆಯ ಕುರಿತು ಈಗಾಗಲೇ ದಿನಾಂಕ: 4.10.2018 ಮತ್ತು 05.10.18ರಂದು ಪ್ರಾಯೋಗಿಕ ತರಬೇತಿಯನ್ನು NIC, ಬೆಂಗಳೂರು ಇವರ ಸಹಯೋಗದೊಡನೆ ಆಯೋಜಿಸಲಾಗಿರುವುದು ಸರಿಯಷ್ಟೆ. ತರಬೇತಿಯ ನಂತರ ಸದರಿ ತಂತ್ರಾಂಶದಲ್ಲಿ ಮಾಹಿತಿಯನ್ನು ಅಳವಡಿಸಲು ಸೂಚಿಸಲಾಗಿತ್ತು.

ಮುಂದುವರಿದಂತೆ, ಉಲ್ಲೇಖ (1)ರ ಪತ್ರದಲ್ಲಿ ತಮ್ಮ ಕೋರಿಕೆಯಂತೆ, ಹೊಸದಾಗಿ ಮಾಹಿತಿ ಅಳವಡಿಸುವ ಸಲುವಾಗಿ, ಈಗಾಗಲೇ ಅಳವಡಿಸಿರುವ ಮಕ್ಕಳ ಪಾಲನಾ ಸಂಸ್ಥೆಗಳ, ಮಕ್ಕಳ ಕಲ್ಯಾಣ ಸಮಿತಿ, ಬಾಲನ್ಯಾಯಮಂಡಳಿ ಮುಂದೆ ಬಂದ ಮಕ್ಕಳ ಮಾಹಿತಿಯನ್ನು ಅಳಿಸಿ ಹಾಕಲು NIC, ಬೆಂಗಳೂರು ಇವರನ್ನು ಕೋರಲಾಗಿತ್ತು. ಆದರೆ, ತಂತ್ರಾಂಶದಲ್ಲಿ ಈಗಾಗಲೇ 13,000ಕ್ಕಿಂತ ಹೆಚ್ಚು ದತ್ತಾಂಶದ ವಿವರಗಳಿರುವುದರಿಂದ ಈಗಿರುವ ಮಾಹಿತಿಯನ್ನು ಅಳಿಸಿ ಹಾಕಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯವು ಒಪ್ಪಿಗೆ ನೀಡಿರುವುದಿಲ್ಲ ಎಂಬ ಅಂಶವನ್ನು NIC, ಬೆಂಗಳೂರು ಇವರು ಉಲ್ಲೇಖ (2)ರ ಇ-ಮೇಲ್ ಪತ್ರದಲ್ಲಿ ತಿಳಿಸಿರುತ್ತಾರೆ.

ಇದಕ್ಕೆ ಸಂಬಂಧಿಸಿದಂತೆ, ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಮಕ್ಕಳ ವಿವರಗಳನ್ನು ಕೂಡಲೇ ಮೇಲಿನ ತಂತ್ರಾಂಶದಲ್ಲಿ ಅಳವಡಿಸುವ ಸಲುವಾಗಿ ಈ ಕೆಳಕಂಡಂತೆ ಕ್ರಮ ವಹಿಸುವುದು.

- ಈಗಾಗಲೇ, 2012-13ನೇ ಸಾಲಿನಿಂದ ತಂತ್ರಾಂಶದಲ್ಲಿ ದಾಖಲಿಸಿರುವ ಮಕ್ಕಳ ಪಾಲನಾ ಸಂಸ್ಥೆಗಳ, ಮಕ್ಕಳ ಕಲ್ಯಾಣ ಸಮಿತಿ ಹಾಗು ಬಾಲನ್ಯಾಯಮಂಡಳಿಗಳಿಗೆ ಸಂಬಂಧಿಸಿದ ಅಪೂರ್ಣ ಮಾಹಿತಿಯನ್ನು ಪೂರ್ಣಗೊಳಿಸುವುದು.

Scanned by CamScanner

ಒಂದು ವೇಳೆ ಈ ಮಾಹಿತಿಯನ್ನು ಅಪ್‌ಡೇಟ್ ಮಾಡುವಾಗ ತಾಂತ್ರಿಕ ಸಮಸ್ಯೆಗಳು ಉಂಟಾದಲ್ಲಿ ಬೆಂಗಳೂರಿನಲ್ಲಿರುವ User Manual ಅಧ್ಯಯನ ಮಾಡಿ ಮಾಹಿತಿಯನ್ನು ಪರೀಕ್ಷಿಸುವುದು ಅಥವಾ ತಂತ್ರಾಂಶದಲ್ಲಿ ತಿಳಿಸಿರುವಂತೆ Helpline ಸಂಪರ್ಕಿಸುವುದು.

- ಸುಪ್ರೀಂಕೋರ್ಟ್ ಆದೇಶದಂತೆ ಸೂಕ್ಷ್ಮವಿಲ್ಲದೆ ಎಲ್ಲಾ ಮಕ್ಕಳ Data Base ಸೃಷ್ಟಿಸಬೇಕಾಗಿರುವುದರಿಂದ ತ್ವರಿತವಾಗಿ ಸ್ವಯಂಸೇವಾ ಸಂಸ್ಥೆಗಳಿಗೆ User ID ಮತ್ತು Pass word ನೀಡುವುದು. ಹಾಗೂ ಈ ಕುರಿತು ಸ್ವಯಂ ಸೇವಾ ಸಂಸ್ಥೆಗಳ ಪದಾಧಿಕಾರಿಗಳಿಗೆ ಡಿಸೆಂಬರ್ ಮೊದಲ ವಾರದಲ್ಲಿ ತರಬೇತಿ ಆಯೋಜಿಸಿ ಮಾಹಿತಿ ದಾಖಲಿಸುವ ಕುರಿತು ತರಬೇತಿ ನೀಡುವುದು.
- ಸ್ವಯಂ ಸೇವಾ ಸಂಸ್ಥೆಯವರು ನಡೆಸುತ್ತಿರುವ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ **ಪಾಲನೆ ಪೋಷಣೆ ಅವಶ್ಯಕತೆ ಇರುವ** ಮಕ್ಕಳ (ಬಾಲ ನ್ಯಾಯಕಾಯ್ದೆ 2015ರ ಸೆಕ್ಷನ್ 2(14) ರಲ್ಲಿ ವಿವರಿಸಿದಂತೆ) ಮಾಹಿತಿಯನ್ನು 2012-13 ನೇ ಸಾಲಿನಿಂದ Track the Child Portal ನಲ್ಲಿ ಡಿಸೆಂಬರ್-2018 ರೊಳಗೆ ಅಳವಡಿಸುವುದು.

ಮೇಲಿನ ಅಂಶಗಳನ್ನು ಅನುಸರಿಸಿ ಜಿಲ್ಲೆಗಳಲ್ಲಿ ಸಂಪೂರ್ಣ ಮಾಹಿತಿಯನ್ನು ಡಿಸೆಂಬರ್ 2018ರೊಳಗೆ ಅಪ್‌ಡೇಟ್ ಮಾಡಿಸುವಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಮೇಲ್ವಿಚಾರಣೆ ಮಾಡುವುದು.

ತಮ್ಮ ವಿಶ್ವಾಸಿ,

ಸದಸ್ಯ ಕಾರ್ಯದರ್ಶಿ,
ಕರ್ನಾಟಕರಾಜ್ಯ ಸಮಗ್ರ ಮಕ್ಕಳ ರಕ್ಷಣಾ
ಘಟಕ, ಬೆಂಗಳೂರು

ಪ್ರತಿಯನ್ನು:

1) ರಾಜ್ಯ ಮಾಹಿತಿ ಅಧಿಕಾರಿಗಳು, NIC, ಬೆಂಗಳೂರು, ಇವರಿಗೆ ಮಾಹಿತಿಗೆ.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಮುಖಾಂತರ ಮುಂದಿನ ಕ್ರಮಕ್ಕೆ

2) ಅಧ್ಯಕ್ಷರು ಮಕ್ಕಳ ಕಲ್ಯಾಣ ಸಮಿತಿ, ಎಲ್ಲಾ ಜಿಲ್ಲೆಗಳು.
3) ಅಧ್ಯಕ್ಷರು ಬಾಲನ್ಯಾಯ ಮಂಡಳಿ, ಎಲ್ಲಾ ಜಿಲ್ಲೆಗಳು.
4) ಮೇಲ್ವಿಚಾರಕರು/ಅಧೀಕ್ಷಕರು, ಬಾಲ ನ್ಯಾಯ ಕಾಯ್ದೆಯಡಿ ನೋಂದಣಿಯಾದ ಮಕ್ಕಳ ಪಾಲನಾ ಸಂಸ್ಥೆಗಳು, ಎಲ್ಲಾ ಜಿಲ್ಲೆಗಳು.